**SEPT 2,2024**
**ALL INDIA RADIO- DHARWAD**
**PRADESH SAMACHARA (KANNADA) 7:05 AM**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ವಿವೇಕಾದಿತ್ಯ**

<><><>

**ಮುಖ್ಯಾಂಶಗಳು:**

- **ಕರ್ನಾಟಕದಲ್ಲಿ 1 ಲಕ್ಷ 33 ಸಾವಿರ ಬಾಲ ವಧುಗಳು – ನ್ಯಾಯಮೂರ್ತಿ ಆರ್.ನಟರಾಜ್, ಕಳವಳ.**
- **ಸೋಲಿಗರ ಭಾಷೆಯ ಡಿಜಿಟಲೀಕರಣ ಅಗತ್ಯವಾಗಿದೆ – ಎಸ್.ಆರ್. ಮಹಾದೇವ ಪ್ರಸನ್ನ.**
- **ಮಾತೃ ಭಾಷೆ ಕನ್ನಡವನ್ನು, ಅನ್ನದ ಭಾಷೆಯಾಗಿಸುವುದು ನಮ್ಮ ಕರ್ತವ್ಯ –ಬಸವರಾಜ ಹೊರಟ್ಟಿ.**
- **ಸಂಪೂರ್ಣತಾ ಅಭಿಯಾನ: ಯಾದಗಿರಿ ಜಿಲ್ಲೆ ವಡಗೇರಾದಲ್ಲಿ, ಜನ ಜಾಗ್ರತಿ.**
- **ಇಂದು, ವಿಶ್ವ ತೆಂಗು ದಿನಾಚರಣೆ.**

<><><>

**ಈಗ ವಾರ್ತೆಗಳ ವಿವರ**

<><><>

**ಸರ್ವೋಚ್ಚ ನ್ಯಾಯಾಲಯಕ್ಕೆ ಕೇಂದ್ರ ಸರ್ಕಾರ ನೀಡಿರುವ ಮಾಹಿತಿ ಪ್ರಕಾರ, ದೇಶದಲ್ಲಿ 2 ಕೋಟಿ 30 ಲಕ್ಷ ಬಾಲ ವಧುಗಳು ಇದ್ದಾರೆ. ಕರ್ನಾಟಕದಲ್ಲಿ 1 ಲಕ್ಷ 33 ಸಾವಿರ ಬಾಲ ವಧುಗಳಿರುವುದು, ಸಮೀಕ್ಷೆಯಿಂದ ತಿಳಿದು ಬಂದಿದೆ. ಈ ಅಂಕಿ–ಸಂಖ್ಯೆಗಳು ಸಾಮಾಜಿಕ ಪಿಡುಗು ಬಾಲ್ಯ ವಿವಾಹದ ವ್ಯಾಪಕತೆಯನ್ನು ಅನಾವರಣಗೊಳಿಸುತ್ತದೆ ಎಂದು, ರಾಜ್ಯ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಆರ್.ನಟರಾಜ್ ಕಳವಳ ವ್ಯಕ್ತ ಪಡಿಸಿದ್ದಾರೆ.**

**ಚಿತ್ರದುರ್ಗ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ, ಅವರು ಬಾಲ್ಯ ವಿವಾಹ ಮತ್ತು ಬಾಲ್ಯದ ಗರ್ಭಾವಸ್ಥೆ ತಡೆಗಟ್ಟುವ ಕುರಿತು, ಉಪನ್ಯಾಸ ನೀಡಿದರು.**

1929 ರಲ್ಲಿ ಬಾಲ್ಯ ವಿವಾಹ ನಿರ್ಬಂಧ ಕಾಯ್ದೆಯನ್ನು ಬ್ರಿಟಿಷ್ ಸರ್ಕಾರ ಜಾರಿಗೆ ತಂದಿತು. 2006 ರಲ್ಲಿ ಬಾಲ್ಯ ವಿವಾಹ ನಿಷೇಧ ಕಾಯ್ದೆ ಜಾರಿಗೊಳಿಸಿ, ಬಾಲ್ಯ ವಿವಾಹ ತಡೆಗಟ್ಟಲು ಒತ್ತು ನೀಡಲಾಗಿದೆ. 18 ವರ್ಷದೊಳಗಿನ ಮಕ್ಕಳ ಮೇಲಿನ ದೌರ್ಜನ್ಯ ತಡೆಯಲು, ಪೊಕ್ಸೋ ಕಾಯ್ದೆ ಜಾರಿಗೆ ಬಂದಿದೆ. ಮಕ್ಕಳು ಹಾಗೂ ಪಾಲಕರಲ್ಲಿ ಜಾಗ್ರತಿ ಮೂಡಿಸಬೇಕು ಎಂದು, ನ್ಯಾಯಮೂರ್ತಿ ಆರ್. ನಟರಾಜ್ ಸೂಚಿಸಿದರು.

ಚಿತ್ರದುರ್ಗ ಜಿಲ್ಲಾ ಪ್ರಧಾನ ನ್ಯಾಯಾಧೀಶ ವಾಸುದೇವ ರೋಣ ಅವರು ಮಾತನಾಡಿ, ಬಾಲ್ಯ ವಿವಾಹ ಹಾಗೂ ಬಾಲ್ಯ ಗರ್ಭಾವಸ್ಥೆ ಪ್ರಕರಣಗಳಲ್ಲಿ, ಚಿತ್ರದುರ್ಗ ಜಿಲ್ಲೆ ರಾಜ್ಯಕ್ಕೆ 5ನೇ ಸ್ಥಾನದಲ್ಲಿದೆ ಎಂದರು.

<><><>

ಬಾಲ್ಯ ವಿವಾಹ ತಡೆಗಟ್ಟಲು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜೊತೆಗೆ, ಇತರೆ 10 ಇಲಾಖೆಗಳು ಸಮನ್ವಯತೆಯಿಂದ ಕೆಲಸ ಮಾಡಬೇಕೆಂದು, ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯೆ ಅಪರ್ಣಾ ಕೊಳ್ಳಾ ಸೂಚಿಸಿದ್ದಾರೆ.

ದಾವಣಗೆರೆಯಲ್ಲಿ ಅವರು ಪ್ರಗತಿ ಪರಿಶೀಲನಾ ಸಭೆ ನಡೆಸಿದರು.

ಮಕ್ಕಳಿಗೆ ಕಡ್ಡಾಯ ಶಿಕ್ಷಣ, ಬಾಲ ಕಾರ್ಮಿಕ ಪದ್ಧತಿ ನಿಷೇಧ, ಬಾಲ್ಯ ವಿವಾಹ ನಿಷೇಧ, ಪೊಕ್ಸೋ ಪ್ರಕರಣಗಳನ್ನು ತಡೆಗಟ್ಟಿ, ಮಕ್ಕಳ ಬಾಲ್ಯವನ್ನು ಸುರಕ್ಷಿತಗೊಳಿಸುವ ಹೊಣೆಗಾರಿಕೆಯನ್ನು, ಬದ್ಧತೆಯಿಂದ ನಿಭಾಯಿಸುವಂತೆ ಅವರು ಜಿಲ್ಲಾಡಳಿತದ ಅಧಿಕಾರಿಗಳಿಗೆ ಸೂಚಿಸಿದರು.

<><><>

ಸೋಲಿಗರ ಭಾಷೆ ತನ್ನ ಸೊಗಡು ಕಳೆದುಕೊಂಡು ಕಣ್ಮರೆಯಾಗುತ್ತಿದೆ. ಭಾಷೆಯನ್ನು ಬಳಕೆಯಲ್ಲಿಟ್ಟು, ಮುಂದಿನ ಪೀಳಿಗೆಗೆ ಡಿಜಿಟಲ್ ಮಾದರಿಯಲ್ಲಿ ಪರಿಚಯಿಸುವುದು ಅತ್ಯಗತ್ಯವಾಗಿದೆ ಎಂದು, ಧಾರವಾಡದ ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆ, ಟ್ರಿಪಲ್ ಐ.ಟಿ. ನಿರ್ದೇಶಕ ಎಸ್.ಆರ್. ಮಹಾದೇವ ಪ್ರಸನ್ನ ತಿಳಿಸಿದ್ದಾರೆ.

ಸೋಲಿಗರ ಭಾಷೆ ಡಿಜಿಟಲ್ ಸಂರಕ್ಷಣೆ ಕಾರ್ಯಗಾರಕ್ಕೆ, ಚಾಮರಾಜನಗರ ಜಿಲ್ಲೆಯ ಯಳಂದೂರು ತಾಲೂಕಿನ, ಬಿಳಿಗಿರಿ ರಂಗನಾಥ ಸ್ವಾಮಿ ಬೆಟ್ಟದ ಗಿರಿಜನ ಕಲ್ಯಾಣ ಕೇಂದ್ರದಲ್ಲಿ ಚಾಲನೆ ನೀಡಿ, ಅವರು ಮಾತನಾಡಿದರು.

ಧಾರವಾಡದ ಭಾರತೀಯ ತಂತ್ರಜ್ಞಾನ ಸಂಸ್ಥೆ – ಐ.ಐ.ಟಿ. ಪ್ರಾಧ್ಯಾಪಕ ದೀಪಕ್ ಮಾತನಾಡಿ, ಯಾವುದೇ ಭಾಷೆ ನಿತ್ಯ ಬಳಕೆಯಲ್ಲಿದ್ದರೆ, ಆಡು ಭಾಷೆಯಾಗಿ ತನ್ನ ಜೀವಂತಿಕೆಯನ್ನು ಉಳಿಸಿಕೊಳ್ಳುತ್ತದೆ. ಇತ್ತೀಚಿನ ದಿನಗಳಲ್ಲಿ ಸೋಲಿಗರು ಶಿಕ್ಷಣದಲ್ಲಿ ಹೊಸ ಭಾಷೆಗೆ ಪ್ರಾಮುಖ್ಯತೆ ನೀಡುತ್ತಿದ್ದು, ತಾಯ್ನುಡಿ ನಶಿಸುತ್ತಿದೆ ಎಂದರು.

<><><>

ಮಾತೃ ಭಾಷೆಯಾಗಿರುವ ಕನ್ನಡ ಭಾಷೆಯನ್ನು, ಅನ್ನದ ಭಾಷೆಯನ್ನಾಗಿ ಪರಿವರ್ತಿಸುವುದು ನಮ್ಮ ಕರ್ತವ್ಯವಾಗಿದೆ ಎಂದು, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದ್ದಾರೆ.

ಅಮೆರಿಕದ ರಿಚ್ಮಂಡ್ ನಗರದಲ್ಲಿ ಆಯೋಜಿತ, 12ನೇ ಅಕ್ಕ ವಿಶ್ವ ಕನ್ನಡ ಸಮ್ಮೇಳನದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ವ್ಯಾವಹಾರಿಕ ಭಾಷೆಯಾಗಿ ಕನ್ನಡ ಮತ್ತು ಉದ್ಯೋಗ ಹಾಗೂ ಇತರ ಕಾರಣಗಳಿಗೆ, ಕನ್ನಡ ಭಾಷೆಯನ್ನೇ ಪ್ರಧಾನವಾಗಿ ಬಳಸುವ ಸವಾಲು ನಮ್ಮ ಮುಂದಿದೆ. ಈ ಕುರಿತು ಗಂಭೀರ ಚಿಂತನೆ ನಡೆಸಬೇಕಿದೆ ಎಂದರು.

<><><>

ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರು, ಕನ್ನಡ ತಂತ್ರಾಂಶದ ಅಭಿವೃದ್ಧಿಗೆ ಗಣನೀಯ ಕೊಡುಗೆ ನೀಡಿದ, 'ಟೆಕ್ನೋ ಸ್ಯಾವಿ' ಸೃಜನಶೀಲ ಸಾಹಿತಿ. ತಮ್ಮ ವಿಶಿಷ್ಟ ಕೃತಿಗಳನ್ನು ಅಚ್ಚುಕಟ್ಟಾಗಿ, ಸುಂದರವಾಗಿ ಮತ್ತು ವಿಭಿನ್ನವಾಗಿ ಮುದ್ರಿಸುವಲ್ಲಿ ಸಿದ್ಧ ಹಸ್ತರಾಗಿದ್ದರು ಎಂದು, ತೇಜಸ್ವಿ ಪ್ರತಿಷ್ಠಾನದ ಸದಸ್ಯ ಕಾರ್ಯದರ್ಶಿ ಡಾಕ್ಟರ್ ಸಿ.ರಮೇಶ್ ಹೇಳಿದ್ದಾರೆ.

ಚಿಕ್ಕಮಗಳೂರು ಜಿಲ್ಲೆ, ಕೊಟ್ಟಿಗೆಹಾರದ ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಪ್ರತಿಷ್ಠಾನದಲ್ಲಿ, ನೂರು ಜನರಿಗಾಗಿ ಎರಡು ದಿನಗಳ ಕ್ಯಾಲಿಗ್ರಫಿ ಕಾರ್ಯಾಗಾರ ಜರುಗಿತು. ಈ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪ್ರತಿಷ್ಠಾನದ ವತಿಯಿಂದ ಆರ್ಕಿಡೇರಿಯಂ ಮತ್ತು ಚಿಟ್ಟೆ ಉದ್ಯಾನ ಶೀಘ್ರ ನಿರ್ಮಾಣವಾಗಲಿದೆ ಎಂದರು.

<><><>

ಮುಂಬರುವ ಅಧಿವೇಶನದಲ್ಲಿ, ರಾಜ್ಯ ಸರ್ಕಾರ ಸರೋಜಿನಿ ಮಹಿಷಿ ವರದಿಯನ್ನು, ಶಾಸನವಾಗಿಸಲು ಕ್ರಮಕೈಗೊಳ್ಳಬೇಕಿದೆ ಎಂದು, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರು ೋತ್ತಮ ಬಿಳಿಮಲೆ ಹೇಳಿದ್ದಾರೆ.

ಮಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸರೋಜಿನಿ ಮಹಿಷಿ ಅವರ ವರದಿಯಲ್ಲಿ 58 ವಿಭಾಗಗಳಿದ್ದು, ಈ ಕಾಲಕ್ಕೆ ಕೇವಲ 14 ವಿಭಾಗಗಳು ಮಾತ್ರ ಅನು ್ಠಾನಕ್ಕೆ ಯೋಗ್ಯವಾಗಿವೆ. ಸದ್ಯದಲ್ಲೇ ಮುಖ್ಯಮಂತ್ರಿಯವರು ಹಾಗೂ ಎಲ್ಲ ಶಾಸಕರಿಗೆ ಮನವಿ ಸಲ್ಲಿಸಲಾಗುವುದು. ಕೈಗಾರಿಕೆಗಳಲ್ಲಿ ಸ್ಥಳೀಯರಿಗೆ ಶೇಕಡ 70 ರ ್ಟ ಉದ್ಯೋಗಗಳನ್ನು ಕಾನೂನು ಬದ್ಧವಾಗಿ ಪಡೆಯಲು ಸಾಧ್ಯವಾಗಲಿದೆ ಎಂದರು.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಕೇಂದ್ರದ ನೀತಿ ಆಯೋಗ ಸಂಚಾಲಿತ, ಮಹತ್ವಾಕಾಂಕ್ಷೆಯ ಸಂಪೂರ್ಣತಾ ಅಭಿಯಾನದಡಿ, ಯಾದಗಿರಿ ಜಿಲ್ಲೆಯ ಆಶೋತ್ತರ ತಾಲೂಕಾಗಿ ವಡಗೇರಾ ಆಯ್ಕೆಯಾಗಿದೆ.

ಕಳೆದ ಜುಲೈ 15 ರಿಂದ ಇಲ್ಲಿಯ ವರೆಗೆ, ತಾಲೂಕಿನಲ್ಲಿ ಮಣ್ಣಿನ ಆರೋಗ್ಯ ಪರೀಕ್ಷಿಸಿ, ಪ್ರಮಾಣೀಕರಿಸಲು ಒಟ್ಟು ಸಾವಿರದ ಇನ್ನೂರು ರೈತರ ಜಮೀನುಗಳ ಮಣ್ಣಿನ ಮಾದರಿ ಸಂಗ್ರಹಿಸಲಾಗಿದೆ.

ಆ ಪೈಕಿ ಎಂಟು ನೂರು ಜನ ರೈತರ ಜಮೀನುಗಳ ಮಣ್ಣಿನ ಪರೀಕ್ಷೆ ನಡೆಸಿ, ಗುಣಮಟ್ಟ ನಿರ್ಧರಿಸಿ, 'ಸಾಯಿಲ್ ಹೆಲ್ತ್ ಕಾರ್ಡ್' ವಿತರಿಸಲಾಗಿದೆ ಎಂದು, ವಡಗೇರಾ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಮಲ್ಲಿಕಾರ್ಜುನ ಸಂಗ್ವಾರ, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ.

<><><>

ಮಲ್ಲಿಕಾರ್ಜುನ ಸಂಗ್ವಾರ ಧ್ವನಿ 48 ಸೆಕೆಂದುಗಳು

<><><>

ಇಂದು ವಿಶ್ವ ತೆಂಗು ದಿನಾಚರಣೆ.

'ವರ್ತುಳ ಆರ್ಥಿಕತೆ; ಮೌಲ್ಯ ಹೆಚ್ಚಿಸಲು ಸೇತುವೆಯಾಗಿ ಪಾಲುದಾರಿಕೆ' ಎಂಬುದು, ಈ ಬಾರಿಯ ವಿಶ್ವ ತೆಂಗು ದಿನಾಚರಣೆಯ ಧ್ಯೇಯವಾಗಿದೆ.

ತೆಂಗಿನ ವಿಶೇಷವಾದ 24 ತಳಿಗಳನ್ನು ಅಭಿವೃದ್ಧಿಪಡಿಸಿ, ರೈತರಿಗೆ ಪರಿಚಯಿಸಿದ ಕಾಸರಗೋಡಿನ, ಕೂಡ್ಲುವಿನಲ್ಲಿರುವ, **Central Plantation Crops Research Institute – C.P.C.R.I.** ಸಂಸ್ಥೆ, 'ತೆಂಗಿನ ಹಾಲಿನ' ಹೊಸ ಉತ್ಪನ್ನ ಬಿಡುಗಡೆಯಾಗುತ್ತಿದೆ.

**C.P.C.R.I.** ನಿರ್ದೇಶಕ ಡಾಕ್ಟರ್ ಕೆ. ಬಾಲಚಂದ್ರ ಹೆಬ್ಬಾರ್ ಪ್ರದೇಶ ಸಮಾಚಾರಕ್ಕಾಗಿ ಹೆಚ್ಚಿನ ಮಾಹಿತಿ ನೀಡಿದ್ದಾರೆ.

<><><>

ಡಾಕ್ಟರ್ ಕೆ. ಬಾಲಚಂದ್ರ ಹೆಬ್ಬಾರ್ ಧ್ವನಿ 63 ಸೆಕೆಂದುಗಳು

<><><>

ಧಾರವಾಡ ಜಿಲ್ಲೆ, ಹುಬ್ಬಳ್ಳಿಯಲ್ಲಿ ಆಯೋಜಿಸಿದ್ದ, ಕಲ್ಪಿತ ಸಂಸತ್ ಸ್ಪರ್ಧೆಯಲ್ಲಿ, ಉತ್ತರ ಕರ್ನಾಟಕ, ದಕ್ಷಿಣ ಮಹಾರಾಷ್ಟ್ರ ಹಾಗೂ ಸಂಪೂರ್ಣ ಗೋವಾ ರಾಜ್ಯ ಸೇರಿ, 9 ರಿಂದ 12ನೇ ತರಗತಿಯ 216 ಜನ ವಿದ್ಯಾರ್ಥಿಗಳು ಭಾಗವಹಿಸಿದ್ದರು ಎಂದು ಯಂಗ್ ಇಂಡಿಯನ್ಸ್ ಸಂಸ್ಥೆಯ ರಾಷ್ಟ್ರೀಯ ಅಧ್ಯಕ್ಷ ವಿಶಾಲಕುಮಾರ್ ಅಗರ್ವಾಲ ತಿಳಿಸಿದ್ದಾರೆ.

ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಅವರು ಉದ್ಘಾಟಿಸಿದ, ಕಲ್ಪಿತ ಸಂಸತ್ ಸ್ಪರ್ಧೆಯಲ್ಲಿ, ಶಶಾಂಕ ಹಬೀಬ, ಅಭಿನವ ಹುರುಳಿಕೊಪ್ಪಿ, ಸಂಜನಾ ರಾಜ, ಸ್ಪಂದನಾ ಧರ್ಮತ್ತಿ ಸೇರಿದಂತೆ 12 ಜನ ವಿದ್ಯಾರ್ಥಿ ಸಂಸದರು ಪ್ರಾದೇಶಿಕ ಸುತ್ತಿನಲ್ಲಿ ಉತ್ತಮ ಪ್ರದರ್ಶನ ನೀಡಿ, ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ ಎಂದು, ದರ್ಶನ ಮುಥಾ ಹೇಳಿದ್ದಾರೆ.

<><><>

ಕಣ್ಣಿನ ಕಾರ್ನಿಯಗಳನ್ನು ಕೃತಕವಾಗಿ ತಯಾರಿಸಲು ಸಾಧ್ಯವಿಲ್ಲ. ಹೀಗಾಗಿ ಕಣ್ಣಿನ ಕಸಿಗೆ ನೈಸರ್ಗಿಕ ಕಾರ್ನಿಯಗಳ ಮೇಲೆ ಅವಲಂಬಿತವಾಗಿದ್ದು, ಮರಣದ ನಂತರ ಕಣ್ಣುಗಳು ಮಣ್ಣಾಗದಂತೆ ಅಥವಾ ಬೆಂಕಿಗೆ ಆಹುತಿಯಾಗದಂತೆ ಕ್ರಮವಹಿಸಬೇಕು. ಕುಟುಂಬದ ಸದಸ್ಯರು ಸಹಕರಿಸಿದರೆ, ನೇತ್ರದಾನದಿಂದ ನಾಲ್ವರಿಗೆ ಕಾರ್ನಿಯಾ ಕಸಿ ಮಾಡಬಹುದು ಎಂದು, ಧಾರವಾಡದ ಎಂ.ಎಂ. ಜೋಶಿ ಕಣ್ಣಿನ ಆಸ್ಪತ್ರೆಯ, ಖ್ಯಾತ ನೇತ್ರ ತಜ್ಞ ಡಾಕ್ಟರ್ ಕೆ.ವಿ. ಸತ್ಯಮೂರ್ತಿ ಹೇಳಿದ್ದಾರೆ. ರಾಷ್ಟ್ರೀಯ ನೇತ್ರದಾನ ಪಾಕ್ಷಿಕ –2024ರ ಅಂಗವಾಗಿ ಅವರು ಜನ ಜಾಗ್ರತಿ ಸಭೆಯಲ್ಲಿ ಮಾತನಾಡಿದರು.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

ಸ್ಥಿರಾಸ್ತಿ ನೋಂದಣಿಗಾಗಿ, ಎನಿವೇರ್ ರಿಜಿಸ್ಟ್ರೇಷನ್ ಯೋಜನೆ ರೂಪಿಸಲಾಗಿದ್ದು, ಇಂದಿನಿಂದ ರಾಜ್ಯಾದ್ಯಂತ ಈ ಯೋಜನೆ ಜಾರಿಗೊಳ್ಳಲಿದೆ. ನಾಗರಿಕರು ತಮ್ಮ ಸಮೀಪವಿರುವ ಯಾವುದೇ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ, ಆಸ್ತಿ ದಾಖಲೆಗಳನ್ನು ನೋಂದಾಯಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

ಅಸ್ನಾ ಚಂಡ ಮಾರುತ ಪಶ್ಚಿಮ ಕರಾವಳಿಗೆ ಅಪ್ಪಳಿಸಿದ್ದು, ರಾಜ್ಯದ ಕರಾವಳಿ ಜಿಲೆಗಳಲ್ಲಿ ಭಾರಿ ಮಳೆಯಾಗುವ ಸಂಭವವಿದೆ ಎಂದು, ಹವಾಮಾನ ಇಲಾಖೆ ಮುನ್ನೆಚ್ಚರಿಕೆ ನೀಡಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

- ಕರ್ನಾಟಕದಲ್ಲಿ 1 ಲಕ್ಷ 33 ಸಾವಿರ ಬಾಲ ವಧುಗಳು – ನ್ಯಾಯಮೂರ್ತಿ ಆರ್.ನಟರಾಜ್, ಕಳವಳ.
- ಸೋಲಿಗರ ಭಾಷೆ ಡಿಜಿಟಲೀಕರಣ ಅಗತ್ಯವಾಗಿದೆ – ಎಸ್.ಆರ್. ಮಹಾದೇವ ಪ್ರಸನ್ನ.
- ಮಾತೃ ಭಾಷೆ ಕನ್ನಡವನ್ನು, ಅನ್ನದ ಭಾಷೆಯಾಗಿಸುವುದು ನಮ್ಮ ಕರ್ತವ್ಯ –ಬಸವರಾಜ ಹೊರಟ್ಟಿ.
- ಸಂಪೂರ್ಣತಾ ಅಭಿಯಾನ; ಯಾದಗಿರಿ ಜಿಲ್ಲೆ ವಡಗೇರಾದಲ್ಲಿ, ಜನ ಜಾಗ್ರತಿ.
- ಇಂದು, ವಿಶ್ವ ತೆಂಗು ದಿನಾಚರಣೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>